# ಶೋಷಣೆಯ ಸಾರ್ವತ್ರಿಕತೆ

ಮಳೆಗಾಲದ ಒಂದು ದಿನ. ಕಿರಿದಾದ ದಾರಿ ಪಾಚಿಯಿಂದ ಹಸಿರುಗಟ್ಟಿ ಜಾರುತ್ತಿತ್ತು. ಆ ಜಾರಿಕೆಯಲ್ಲೇ ಹೇಗೋ ಸಾವರಿಸಿಕೊಳ್ಳುತ್ತಾ ಅತ್ಯಂತ ಎಚ್ಚರದಿಂದ ಕಾಲುಗಳು ಹೆಜ್ಜೆ ಹಾಕುತ್ತಿದ್ದವು. ಅಷ್ಟಾದರೂ ತಲೆ ಕಾಲುಗಳನ್ನು– 'ಎಷ್ಟು ಸೊಕ್ಕು ನಿಮಗೆ! ಸ್ವಲ್ಪ ನಿಧಾನವಾಗಿ ನಡೆಯಬಾರದೇ? ನೀವೆಲ್ಲಾದರೂ ಜಾರಿದರೆ, ನನ್ನ ಗತಿ ದೇವರೇ ಗತಿ!' ಎಂದು ಗದರಿಸಿತು. ಬಡಪಾಯಿ, ಕಾಲುಗಳು ತಲೆಯ ಆಜ್ಞೆಯನ್ನು ಶಿರಸಾ ವಹಿಸಿದವು. ಮಳೆಗಾಲ ಕಳೆದು, ಬೇಸಿಗೆ ಕಾಲಿರಿಸಿತು. ನೆತ್ತಿಯ ಮೇಲೆ ಸೂರ್ಯ ಪ್ರಖರವಾಗಿ ಉರಿಯುತ್ತಿದ್ದ. ಕೆಳಗಿನ ನೆಲವಂತೂ ಕೆಂಡದಂತೆ ಸುಡುತ್ತಿತ್ತು. ಇಂಥ ಸುಡು ಬಿಸಿಲಲ್ಲಿ ನಡೆದೂ ನಡೆದೂ ಸುಸ್ತಾದ ಕಾಲುಗಳು ತಲೆಯನ್ನು ದೈನ್ಯದಿಂದ 'ಸ್ವಾಮೀ, ತುಂಬಾ ದಣಿವು. ಮುಂದೆ ಹೆಜ್ಜೆ ಇಡಲಾರದಷ್ಟು ಸುಸ್ತು... ಕೊಂಚ ವಿಶ್ರಮಿಸಿಕೊಳ್ಳಬಹುದೇ?' ಎಂದು ಅಂಗಲಾಚಿದವು. ತಲೆ ಗರ್ಜಿಸಿತು– 'ಈ ಉರಿ ಬಿಸಿಲಲ್ಲಿ ಕುಳಿತು ನನ್ನನ್ನು ಸಾಯಿಸಬೇಕೆಂದಿದ್ದೀರಾ?... ಸಾಧ್ಯವೇ ಇಲ್ಲ... ಮೊದಲು ನನ್ನನ್ನು ಮನೆಗೆ ತಲುಪಿಸಿ... ಬೇಗ ಬೇಗ ಹೆಜ್ಜೆ ಹಾಕಿ.'

ಈ ಪುಟ್ಟ ಪ್ರಸಂಗ ಮನುಷ್ಯ ಜಗತ್ತಿನಲ್ಲಿ ಸಾರ್ವತ್ರಿಕ ಹಾಗೂ ಸಾರ್ವಕಾಲಿಕವಾಗಿರುವ ಶೋಷಣಾ ಪ್ರವೃತ್ತಿಯನ್ನು ಧ್ವನಿಸುವ ಅನ್ಯೋಕ್ತಿ (Allegory) ಯಂತಿದೆಯಲ್ಲವೆ? ಕಾಲುಗಳ ಶೋಚನೀಯ ಸ್ಥಿತಿ ತಲೆಯ ಅನುಕಂಪಕ್ಕೆ ಪಕ್ಕಾಗುವುದೇ ಇಲ್ಲ; ಮಾತ್ರವಲ್ಲ, ಎಂಥ ಸ್ಥಿತಿಯಲ್ಲೂ ತನ್ನ ಹಿತಕ್ಕಾಗಿ ಕಾಲುಗಳು ದುಡಿಯಬೇಕೆಂದು ತಲೆಯ ಅಪೇಕ್ಷೆ. ಮನುಷ್ಯ ಪ್ರಪಂಚದಲ್ಲೂ ಹೀಗೇ; ಆಳುವವರು ಕೆಲವರಾದರೆ, ಆಳಲ್ಪಡುವವರು ಬಹು ಸಂಖ್ಯಾತರು, ಇನ್ನೊಬ್ಬರ ಇಚ್ಛೆಗೆ ಅನುಗುಣವಾಗಿ ಬದುಕುವ ಮಂದಿ ತಮ್ಮ ಸ್ವಂತಿಕೆಯನ್ನೂ, ಸ್ವಹಿತವನ್ನೂ ಬಲಿಕೊಡಬೇಕಾಗುತ್ತದೆ. ಶೋಷಣೆ ಮಾಡುವವರು ನಿರ್ದಾಕ್ಷಿಣ್ಯವಾಗಿ ತಮ್ಮ ಸ್ವಾರ್ಥ ಸಾಧನೆಗೆ ಇತರರ ಹಿತವನ್ನು ಕಬಳಿಸುತ್ತಾರೆ. 'ಶೋಷಿಸುವುದು' ಎಂದರೆ 'ಒಣಗಿಸುವುದು' ಎಂಬ ಅರ್ಥವಿದೆಯಷ್ಟೆ? ಶೋಷಣೆಗೆ ಒಳಗಾದ ವ್ಯಕ್ತಿ ಅಸ್ತಿತ್ವದ ಎಲ್ಲ ಮುಖಗಳಲ್ಲೂ ಗೆಲುವನ್ನು ಕಳೆದುಕೊಂಡು, ಒಣಗಿ ಹೋಗುತ್ತಾನೆ. ಶೋಷಣೆಯಿಂದಾಗಿ ದುಡಿಯುವಾತ ತನ್ನ ದುಡಿಮೆಯ ಪ್ರತಿಫಲವನ್ನು ಅನುಭವಿಸದೇ ಇನ್ನೊಬ್ಬರಿಗಾಗಿ ದುಡಿಯುತ್ತಾನೆ; ಪಡೆಯುವಾತ ಸ್ವಂತ ಪರಿಶ್ರಮವಿಲ್ಲದೆ ಸುಖವನ್ನು ಅನುಭವಿಸುತ್ತಾನೆ. ಶೋಷಣಾ ಪ್ರವೃತ್ತಿಯ ಹಿಂದೆ ಸ್ವಾರ್ಥವಿದೆ; ಅದರ ಜೊತೆ ಜೊತೆಯಲ್ಲಿ ಕ್ರೌರ್ಯ, ಹಿಂಸಾನಂದ ಪ್ರವೃತ್ತಿ, ಅನುಕ್ರೋಶದ ಅಭಾವ– ಮುಂತಾದವುಗಳೂ ಸೇರಿಕೊಳ್ಳುತ್ತವೆ, ಹೀಗಾಗಿ ಪಡೆಯುವಾತ ದುಡಿಯುವಾತನನ್ನು, ಶ್ರೀಮಂತ ಬಡವನನ್ನು, ಬಲಿಷ್ಠ ಬಲಹೀನನನ್ನು, ಅಧಿಕಾರವಿರುವಾತ ಅಧಿಕಾರ ವಿಲ್ಲದವನನ್ನು ಶೋಷಿಸುತ್ತಾರೆ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷನಿಂದ ಮಹಿಳೆ ಶೋಷಣೆಗೆ ಒಳಗಾಗುತ್ತಾಳೆ. ಜಾತಿ ಧರ್ಮಗಳ ಹೆಸರಿನಲ್ಲಿ, ಪಕ್ಷ ಪಂಥಗಳ ಹೆಸರಿನಲ್ಲಿ ಶತಮಾನಗಳಿಂದ ಶೋಷಣೆ ನಡೆಯುತ್ತಲೇ ಇದೆ. ಮನುಷ್ಯರನ್ನು ವಸ್ತುಗಳಂತೆಯೋ, ಪಶುಗಳಂತೆಯೋ ಪರಿಗಣಿಸಿ ಮಾರಾಟ ಮಾಡುತ್ತಿದ್ದ ಗುಲಾಮೀ ಪದ್ಧತಿ ಶೋಷಣಾ ಪ್ರವೃತ್ತಿಯ ಪರ್ಯಾಪ್ತ ಸ್ಥಿತಿಯನ್ನು ತೋರಿಸುತ್ತದೆ.

ಅಸಮಾನತೆಯೇ ಶೋಷಣೆಯ ಪ್ರವೇಶದ್ವಾರ, ಅಸಮಾನತೆಯೆಂಬುದು ಆರ್ಥಿಕವಾಗಿರಬಹುದು; ದೈಹಿಕವಾಗಿರಬಹುದು; ಬೌದ್ಧಿಕ ಅಥವಾ ಮಾನಸಿಕವಾಗಿರಬಹುದು, ಈ ಅಸಮಾನತೆಯಿಂದಾಗಿ ಶ್ರೇಷ್ಠ–ಕನಿಷ್ಠವೆಂಬ ತಾರತಮ್ಯ ಹುಟ್ಟಿಕೊಳ್ಳುತ್ತದೆ. ಮೇಲು ಎನ್ನಿಸಿಕೊಳ್ಳುವ ವ್ಯಕ್ತಿಯಲ್ಲಿ ಸ್ವಾರ್ಥ, ಕ್ರೌರ್ಯ– ಇತ್ಯಾದಿಗಳು ಸೇರಿಕೊಂಡಾಗ ಕೆಳಗಿರುವಾತನನ್ನು ಆತ ಶೋಷಿಸತೊಡಗುತ್ತಾನೆ. ಆರ್ಥಿಕವಾಗಿ, ದೈಹಿಕವಾಗಿ ದಮನಕ್ಕೆ ಒಳಗಾಗುವ ಮಂದಿಯಂತೆಯೇ, ಬೌದ್ಧಿಕವಾಗಿ ಶೋಷಿಸಲ್ಪಡುವವರೂ ಸಾಕಷ್ಟು ಮಂದಿ ಇದ್ದಾರೆ. ಒಟ್ಟಿನಲ್ಲಿ ದುರ್ಬಲರೇ ಶೋಷಿತರು. 'ಅಶ್ವಂ ನೈವ ಗಜಂ ನೈವ ವ್ಯಾಘ್ರಂ ನೈವ ಚ ನೈವಚ। ಅಜಾಪುತ್ರಂ ಬಲಿಂ ದದ್ಯಾತ್ ದೇವೋ ದುರ್ಬಲ ಘಾತಕಃ' (ಕುದುರೆಯನ್ನಲ್ಲ, ಆನೆಯನ್ನಲ್ಲ, ಹುಲಿಯನ್ನಂತೂ ಖಂಡಿತ ಅಲ್ಲ; ಮೇಕೆ ಮರಿಯನ್ನೇ ಬಲಿಯಾಗಿ ಕೊಡಬೇಕು. ದೇವರೂ ದುರ್ಬಲರನ್ನೇ ಕೊಲ್ಲುತ್ತಾನೆ) ಎನ್ನುತ್ತದೆ ಒಂದು ಸುಭಾಷಿತ.

ಬಗ್ಗುವವರ ಬೆನ್ನ ಮೇಲೆಯೇ ಗುದ್ದು, ಗುದ್ದು ಬೀಳದಿರಬೇಕಾದರೆ ಸೆಟೆದು ನಿಲ್ಲಬೇಕು. ಗುದ್ದುವಾತನ ಕೈ ಅಲುಗಾಡದಂತೆ ಹಿಡಿದು ಪ್ರತಿಭಟಿಸಬೇಕು. ಶೋಷಣೆ ಎಂಬ ವ್ಯಾಧಿಗೆ ಪ್ರತಿಭಟನೆಯೇ ಮದ್ದು!

■ ವೈನತೇಯ

## ಮಾತೇ ಮುತ್ತು

★ ಗತಕಾಲದ ಅತಿದೊಡ್ಡ ರಾಜಕೀಯ ಅಂಧಶ್ರದ್ಧೆ– ದೊರೆಗಳ ದೈವದತ್ತ ಅಧಿಕಾರವನ್ನು ಕುರಿತ ನಂಬಿಕೆ. ಈ ಯುಗದ ಅತಿ ದೊಡ್ಡ ರಾಜಕೀಯ ಅಂಧಶ್ರದ್ಧೆ– ಶಾಸನ ಸಭೆಗಳ ಅಧಿಕಾರದಲ್ಲಿ ಕುರುಡು ನಂಬಿಕೆ!

-ಹರ್ಬರ್ಟ್ ಸ್ಪೆನ್ಸರ್

★ ಬಂದೂಕು, ಬಾಯಿ, ಯುದ್ಧನೌಕೆ, ಯುದ್ಧ ವಿಮಾನ– ಎಲ್ಲವೂ ಮಾನವ ಕೋಟಿಯ ಅಪಜಯದ ಧ್ವಜಪತಾಕೆಗಳು.

-ಲಿಂಡನ್ ಜಾನ್‌ಸನ್

★ ವಿಶ್ವಶಾಂತಿ ಸಾಧನೆ ಅಸಾಧ್ಯ ಎಂದು ಅನೇಕರು ಯೋಚಿಸುತ್ತಾರೆ. ಮನಶ್ಶಾಂತಿ ಎಂದೂ ಎಟುಕಿಸದ ಫಲ ಎಂದು ತಿಳಿಯುತ್ತಾರೆ. ಇಂಥ ಸಾಧನೆ ಅಸಾಧ್ಯ ಎಂದು ತಿಳಿಯದವರು ಅದನ್ನು ಸಾಧಿಸಬಲ್ಲರು.

-ಪೀಸ್ ಪಿಲ್‌ಗ್ರಿಮ್

★ ಆಸ್ತಿಯ ಯಜಮಾನನಾಗಿರುವ ಶ್ರೀಮಂತರು ಕೆಲವರು ಮಾತ್ರ; ಅನೇಕರು ಅದರ ಗುಲಾಮರೇ.

-ಆರ್.ಜಿ.ಇಂಗರ್‌ಸಾಲ್

★ ಮೌನವು ಸಾಧನೆಗೆ ಮುಖ್ಯ ಸಾಧನ. ಮೌನವು ಮಾನಸಿಕವಾಗಿ ನೆಮ್ಮದಿ ಕೊಡುತ್ತದೆ. ಮೌನದಿಂದ ಆತ್ಮಸಾಧನವೂ ಸಾಧ್ಯ.

-ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

★ ಸತ್ಯ ಅಂದ್ರೇನು? ಅದು ತಿಳಕೊಳ್ಳಾಕ ಇರ್ತದ ವಿನಃ ಹುಡುಕಾಡೂದಲ್ಲ. ಸತ್ಯ ಹುಡುಕಾಡವ್ನ ಒಳಗ ಅದ. ಯಾವಾಗ ಗೊತ್ತಾಗತದ ಅಂದ್ರ ಹುಡುಕ್ಯಾಡೂದು ಸಾಕನಿಸಿದಾಗ ಅದು ಗೊತ್ತಾಗ್ತದ.

-ಸಿದ್ದೇಶ್ವರ ಸ್ವಾಮಿಗಳು

★ ಸತ್ಯದ ಎಲ್ಲ ಮುಖಗಳೂ ಎಲ್ಲರಿಗೂ ಕಾಣದಿರಬಹುದು. ಒಂದು ಕಾಲದಲ್ಲಿ ಕಾಣದಿದ್ದದ್ದು ಮತ್ತೊಂದು ಕಾಲದಲ್ಲಿ ಕಾಣಬಹುದು. ಈ ಸಾಧ್ಯತೆಯೂ ಸತ್ಯ.

-ಎ.ಎನ್.ಮೂರ್ತಿರಾವ್

★ ಪ್ರಚಾರದಿಂದ ತಪ್ಪು ಎಂದೂ ಸತ್ಯವಾಗಲಾರದು; ಸತ್ಯವನ್ನು ಯಾರೂ ನೋಡಲಿಲ್ಲ ಎಂಬ ಕಾರಣಕ್ಕೆ ಅದು ತಪ್ಪಾಗಲಾರದು.

- ಗಾಂಧೀಜಿ

★ ನೀನು ಸತ್ಯವನ್ನು ತಿರುಚಬಹುದು. ದುರ್ಬಳಕೆ ಮಾಡಿಕೊಳ್ಳಬಹುದು. ಆದರೆ ದೇವರಿಗೂ ಸಹ ಸತ್ಯವನ್ನು ಬದಲಿಸಲಾಗದು.

ಮೈಕಲ್ ಲೆವಿ

★ ದಿನದಿನವೂ ಪ್ರಾಣಿಗಳು ಸಾಯುತ್ತಲೇ ಇರುತ್ತವೆ. ಉಳಿದವರು ಮಾತ್ರ ಸ್ಥಿರವಾಗಿರಲಪೇಕ್ಷಿಸುತ್ತಾರೆ! ಇದಕ್ಕಿಂತ ಆಶ್ಚರ್ಯವಾದುದೇನುಂಟು?

-ಮಹಾಭಾರತ

★ ಸುಖ ನಮ್ಮಲ್ಲಿನ ಕೆಟ್ಟದ್ದನ್ನು ಹೊರತಂದರೆ, ಕಷ್ಟ ನಮ್ಮಲ್ಲಿನ ಒಳ್ಳೆಯದನ್ನು ಹೊರತರುತ್ತದೆ.

-ಫ್ರಾನ್ಸಿಸ್ ಬೇಕನ್

★ ಸಂಸ್ಕೃತ ಬಾವಿ ನೀರು– ಕೆಲವರಿಗೆ ಲಭ್ಯ. ಆಡುಭಾಷೆ ಹರಿಯುವ ನೀರು– ಎಲ್ಲರಿಗೂ ಲಭ್ಯ.

-ಕಬೀರ್

★ ಸಂಸ್ಕೃತವು ದೇವ ಭಾಷೆಯಾದರೆ, ಪ್ರಾಕೃತವು (ಮರಾಠಿ, ಕನ್ನಡ ಇತ್ಯಾದಿ) ದೆವ್ವಗಳ ಭಾಷೆಯೆ?

-ಸಂತ ಏಕನಾಥ

★ ದುಃಖ ಪಟ್ಟವನಿಗೇ ಸುಖ ಎಂದರೆ ಏನೆನ್ನುವುದು ತಿಳಿಯುತ್ತದೆ. ಜೀವನದಲ್ಲಿ ಕಷ್ಟ ಇರಬೇಕು, ಕಾಳಜಿ ಇರಬೇಕು, ಸಂಕೀರ್ಣತೆ ಇರಬೇಕು, ಹೃದಯ ಬಿರಿಯುವ ವ್ಯಥೆ ಇರಬೇಕು. ಅವು ಇದ್ದರೇನೇ ಜೀವನದಲ್ಲಿ ರುಚಿ ಇರುತ್ತದೆ. ಆನಂದ ಇರುತ್ತದೆ.

-ಪಾಟೀಲ ಪುಟ್ಟಪ್ಪ